ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ದತ್ತ ವೇಂಕಟೇಶ್ವರ ದೇವಸ್ಥಾನ

**"ಏಡು ಕೊಂಡಲವಾಡಾ ವೇಂಕಟರಮಣಾ ಗೋವಿಂದಾ ಗೋವಿಂದ,**

**ಏಡು ಕೊಂಡಲವಾಡಾ ವೇಂಕಟರಮಣಾ ಗೋವಿಂದಾ ಗೋವಿಂದ"**

ಅಂತ ಮನಸ್ಸಿನಲ್ಲಿ ಸ್ಮರಿಸುತ್ತಾ, ಶ್ರೀ ದತ್ತ ವೇಂಕಟೇಶ್ವರ ಇವತ್ತು ಏನು ಅಲಂಕಾರ ಮಾಡಿಕೊಂಡಿರುತ್ತಾನೋ ಎಷ್ಟು ಭವ್ಯವಾಗಿರುತ್ತಾನೋ ಅಂತ ಯೋಚಿಸ್ತಾ, ಹತ್ತಿರಕ್ಕೆ ಕಾರು ಹೋಗ್ತಾ ಇದ್ದಂತೆ, ದೊಡ್ಡದಾಗಿ ಆಂಜನೇಯಸ್ವಾಮಿ ನಮಸ್ಕಾರ ಮಾಡ್ತಾ ಕಂಡಾಗ, ನಾವೂ ನಮಸ್ಕಾರ ಮಾಡಿ, ಗೋಪುರಕ್ಕೆ ನಮಸ್ಕಾರ ಮಾಡಿ, ಅಲ್ಲಿರುವ ಸರಸ್ವತಿ, ಲಕ್ಷ್ಮಿ ಎಲ್ಲರಿಗೂ ನಮಸ್ಕಾರ ಮಾಡಿಕೊಂಡು, ದೇವಸ್ಥಾನದ ಮೆಟ್ಟಿಲು ಹತ್ಕೊಂಡು ಬರ್ತಾ ಇರೋವಾಗ, ಅಕ್ಕ ಪಕ್ಕ ಇರೋ ಶಂಖನಿಧಿ, ಪದ್ಮನಿಧಿ ಇಬ್ಬರನ್ನೂ ನೋಡಿ, ಅಲ್ಲಿ ಹೊಸಲಿಗೆಲ್ಲಾ ನಮಸ್ಕಾರ ಮಾಡಿಕೊಂಡು, ಧ್ವಜಸ್ತಂಭ, ಬಲಿಹರಣ ಮಂಟಪ, ಎಲ್ಲಾದರ ಪಕ್ಕದಿಂದ ಕಾಣ್ತಾ ಇರೋ ವೇಂಕಟರಮಣನನ್ನ ದೂರದಿಂದ ನೋಡಿ, ಆಮೇಲೆ ಗೋಡೆ ಮೇಲೆ ಇರುವ ರಂಗನಾಥಸ್ವಾಮಿಯನ್ನ ನೋಡಿಕೊಂಡು, ನಮಸ್ಕಾರ ಮಾಡಿ, ಎಡಗಡೆ ತಿರುಗಿ, ಗೋಡೆ ಮೇಲಿರೋ ಸ್ವಾಮೀಜಿ Photo ನೋಡಿದಾಗ, ಅವರ ದಯೆಯಿಂದ, ತಿರುಪತಿಯವರೆಗೆ ಹೋಗಲಾಗದಿದ್ದರೂ, ಇಲ್ಲೇ ವೇಂಕಟರಮಣನ ದರ್ಶನ ಭಾಗ್ಯ ಕರುಣಿಸಿದ್ದಾರೆ ಅಂತ, ಗುರುಗಳಿಗೆ ಪ್ರಾರ್ಥನೆ ಮಾಡ್ತಾ,

"ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ |
ಗುರುರೇವ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ ||
ಮಂತ್ರಮೂಲಂ ಗುರೋರ್ವಾಕ್ಯಂ ಪೂಜಾಮೂಲಂ ಗುರುಕೃಪಾ।
ಮೋಕ್ಷಮೂಲಂ ಗುರುಪಾದಂ ತಸ್ಮೈ ಶ್ರೀಗುರವೇ ನಮಃ ||"

ಅಂತ ಗುರುಗಳಿಗೆ ವಂದನೆ ಮಾಡಿ, ಅಲ್ಲಿ ತುಂಬಾ ವರ್ಷಗಳಿಂದ ಇರೋ ಅಮೃತಶಿಲೆಯ ದತ್ತಾತ್ರೇಯರಿಗೂ ನಮಸ್ಕಾರ ಮಾಡಿ, ಬಲಗಡೆ ತಿರುಗಿ, ಮುದ್ದಾದ ಗಣಪತಿ, ಅವನ ಸೊಂಡಿಲು,

ಚೆನ್ನಾಗಿರೋ ದೊಡ್ಡ ಕಣ್ಣುಗಳು, ಹೊಟ್ಟೆ ಸುತ್ತ ಇರೋ ಮರಿ ಹಾವು, ಕೆಳಗಡೆ ಇಲಿ, ಅಲಂಕಾರ ಎಲ್ಲಾ ನೋಡಿ,

“ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ

ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ”

ಅಂತ ಅಕ್ಕ ಪಕ್ಕ ಇರೋ ಗಣಪತಿ ನಾಮಗಳನ್ನೆಲ್ಲಾ ಓದಿ, ನಮಸ್ಕಾರ ಮಾಡಿ, ಮಂಗಳಾರತಿ ಕಣ್ಣೊಗ್ತ್ಕೊಂಡು, ಕೊಟ್ಟ ಪ್ರಸಾದ ತೊಗೊಂಡು, ದೊಡ್ಡ ಪಾತ್ರೆಲಿರೋ ವಿಭೂತಿ ಹಚ್ಚಿಕೊಂಡು, ಮತ್ತೆ ಬಲಕ್ಕೆ ತಿರುಗಿ, ಪದ್ಮಾವತೀ ಸನ್ನಿಧಿಗೆ ಬಂದು, ಅಮ್ಮನವರನ್ನು ಕಂಡ ತಕ್ಷಣ ನೆನಪಾದ,

“ಲಕ್ಷ್ಮೀಂ ಕ್ಷೀರಸಮುದ್ರರಾಜ ತನಯಾಂ ಶ್ರೀರಂಗಧಾಮೇಶ್ವರೀಮ್

ದಾಸೀಭೂತ ಸಮಸ್ತದೇವ ವನಿತಾಂ ಲೋಕೈಕ ದೀಪಾಂಕುರಾಮ್

ಶ್ರೀಮನ್ಮಂದ ಕಟಾಕ್ಷ ಲಬ್ಧ ವಿಭವದ್-ಬ್ರಹ್ಮೇಂದ್ರ ಗಂಗಾಧರಾಮ್

ತ್ವಾಂ ತ್ರೈಲೋಕ್ಯ ಕುಟುಂಬಿನೀಂ ಸರಸಿಜಾಂ ವಂದೇ ಮುಕುಂದಪ್ರಿಯಾಮ್”

ಅಂತ ಪ್ರಾರ್ಥಿಸಿ, ಅಮ್ಮನವರ ದರ್ಶನ ಮಾಡಿ, ಸುತ್ತ ಇಟ್ಟಿರೋ ದೀಪಗಳನ್ನ ನೋಡಿ, ಚೆನ್ನಾಗಿ ಬತ್ತಿ ಇರೋ, ಚೆನ್ನಾಗಿರೋ ದೀಪಗಳನ್ನ ತೊಗೊಂಡು, ಶಾಸ್ತ್ರಿಗಳು ಹೇಳಿದ ಸಂಕಲ್ಪ ಮಾಡಿಕೊಂಡು, ಉತ್ಸವ ಮೂರ್ತಿ ಮುಂದೆ ಇರೋ ದೀಪದಿಂದ ನಮ್ಮ ದೀಪ ಹತ್ತಿಸಿಕೊಂಡು, ಅಮ್ಮನವರನ್ನ ನೋಡ್ತಾ, ದೊಡ್ಡ ಕಣ್ಣು, ಫಳ ಫಳ ಹೊಳೀತಾ ಇರೋ ಮೂಗುತಿ, ನಮ್ಮನ್ನ ಆಶೀರ್ವದಿಸ್ತಾ ಇರೋ ತುಟಿ, ಝುಮುಕಿ, ಚೆನ್ನಾಗಿರೋ ಸರ, ದೊಡ್ಡ ತಾಳಿ, ಕೆಳಗಡೆ ಪಾದಗಳು, ಅಭಯಹಸ್ತ, ಶ್ರೀಚಕ್ರ, ಎಲ್ಲಾ ನೋಡಿ,

“ಭೋ ದೀಪದೇವಿ ರೂಪಸ್ತ್ವಂ ಸರ್ವೇಷಾಂ ಹೃದಿ ಸಂಸ್ಥಿತಾಂ,

ಅಥಸ್ತ್ವಾಂ ಸ್ಥಾಪಯಾಂ ಅದ್ಯ ಮದಜ್ಞಾನಮಪಾಕುರು”

ಅಂತ ಪ್ರದಕ್ಷಿಣೆ ಮಾಡಿ, ಸುತ್ತಲೂ ಇರುವ ಅಷ್ಟಲಕ್ಷ್ಮಿಯರಿಗೆ ಮಂಗಳಾರತಿ ಮಾಡಿ,

“ಧನಮಗ್ನಿರ್ಧನಂ ವಾಯುಃ ಧನಂ ಭೂತಾನಿ ಪಂಚ ಚ ।

ಪ್ರಭೂತೈಶ್ವರ್ಯ ಸಂಧಾತ್ರೀಂ ಧನಲಕ್ಷ್ಮೀಂ ನಮಾಮ್ಯಹಮ್॥

ಪೃಥ್ವೀಗರ್ಭ ಸಮುದ್ಧಿನ್ನ ನಾನಾವ್ರೀಹಿ ಸ್ವರೂಪಿಣೀಂ।
ಪಶುಸಂಪತ್ಸ್ವರೂಪಾಂ ಚ ಧಾನ್ಯಲಕ್ಷ್ಮೀಂ ನಮಾಮ್ಯಹಮ್॥
ನ ಮಾತ್ಸರ್ಯಂ ನ ಚ ಕ್ರೋಧೋ ನ ಭೀತಿರ್ನಚ ಭೇಧಧೀಃ।
ಯದ್ಭಕ್ತಾನಾಂ ವಿನೀತಾನಾಂ ಧೈರ್ಯಲಕ್ಷ್ಮೀಂ ನಮಾಮ್ಯಹಮ್॥
ಪುತ್ರಪಾತ್ರಸ್ವರೂಪೇಣ ಪಶುಭೃತ್ಯಾತ್ಮನಾ ಸ್ವಯಂ।
ಸಂಭವಂತೀಂ ಚ ಸಂತಾನಲಕ್ಷ್ಮೀಂ ದೇವೀಂ ನಮಾಮ್ಯಹಮ್॥
ನಾನಾವಿಜ್ಞಾನ ಸಂಧಾತ್ರೀಂ ಬುದ್ಧಿ ಶುದ್ಧಿ ಪ್ರದಾಯಿನೀಂ।
ಅಮೃತತತ್ವ ಪ್ರದಾತ್ರೀಂ ಚ ವಿದ್ಯಾಲಕ್ಷ್ಮೀಂ ನಮಾಮ್ಯಹಮ್॥
ನಿತ್ಯಸೌಭಾಗ್ಯ ಸೌಶೀಲ್ಯಂ ವರಲಕ್ಷ್ಮೀ ದದಾತಿಯಾ।
ಪ್ರಸನ್ನಾಂ ಸ್ತ್ರೈಣಸುಲಭಾಂ ಆದಿಲಕ್ಷ್ಮೀಂ ನಮಾಮ್ಯಹಮ್॥
ಸರ್ವಶಕ್ತಿ ಸ್ವರೂಪಾಂಚ ಸರ್ವಸಿದ್ಧಿಪ್ರದಾಯಿನೀಂ।
ಸರ್ವೇಶ್ವರೀಂ ಶ್ರೀ ವಿಜಯಲಕ್ಷ್ಮೀಂ ದೇವೀಂ ನಮಾಮ್ಯಹಮ್॥
ಅಷ್ಟಲಕ್ಷ್ಮೀ ಸಮಾಹಾರ ಸ್ವರೂಪಾಂ ತಾಂ ಹರಿಪ್ರಿಯಾಂ।
ಮೋಕ್ಷಲಕ್ಷ್ಮೀಂ ಮಹಾಲಕ್ಷ್ಮೀಂ ಸರ್ವಲಕ್ಷ್ಮೀಂ ನಮಾಮ್ಯಹಮ್॥
ದಾರಿದ್ರ್ಯ ದುಃಖಹರಣಂ ಸಮೃದ್ಧಿರಪಿ ಸಂಪದಾಂ।
ಸಚ್ಚಿದಾನಂದ ಪೂರ್ಣತ್ವಂ ಅಷ್ಟಲಕ್ಷ್ಮೀಸ್ತುತೇರ್ಭವೇತ್॥"

ಅಂತ ಪ್ರಾರ್ಥಿಸಿ, ಆದಿಲಕ್ಷ್ಮಿ, ಧಾನ್ಯಲಕ್ಷ್ಮಿ, ಧೈರ್ಯಲಕ್ಷ್ಮಿ, ಗಜಲಕ್ಷ್ಮಿ, ಸಂತಾನಲಕ್ಷ್ಮಿ, ವಿಜಯಲಕ್ಷ್ಮಿ, ವಿದ್ಯಾಲಕ್ಷ್ಮಿ, ಧನಲಕ್ಷ್ಮಿ ಎಲ್ಲರಿಗೂ ನಮಸ್ಕಾರ ಮಾಡಿ, ಅಲ್ಲಿರುವ ಮಹಾಕಾಳಿ, ಮಹಾಸರಸ್ವತಿ, ಮಹಾಲಕ್ಷ್ಮಿಯರಿಗೆ ಮಂಗಳಾರತಿ ಮಾಡಿ, ಬಂದು, ಉತ್ಸವ ಮೂರ್ತಿ ಮುಂದೆ ದೀಪನ ಇಟ್ಟು, ಮತ್ತೆ ಪ್ರಸಾದ ಇಸ್ಕೊಂಡು, ಮತ್ತೊಮ್ಮೆ ಅಮ್ಮನವರನ್ನ ನೋಡಿ, ನಮಸ್ಕಾರ ಮಾಡಿ, "ನಡಿರೇಯಿ ಈ ಜಾಮುಲೋ ಸ್ವಾಮಿ ನಿನು ಚೇರ ದಿಗಿವಚ್ಚುನೋ" ಅನ್ನೋ ತೆಲುಗು ಹಾಡು ನೆನಪಾಗಿ, ಅಮ್ಮಾ, ಆ ವೇಂಕಟರಮಣ ರಾತ್ರಿ ನಿನ್ನ ಬಳಿ ಬಂದಾಗ, ಅವನಿಗೆ ನಮ್ಮ ಬೇಡಿಕೆಗಳನ್ನೆಲ್ಲಾ ತಿಳಿಸಮ್ಮಾ ಅಂತ ಬೇಡಿ, ಅಲ್ಲಿಂದ ಬಂದು, ಕುಂಕುಮ ಪ್ರಸಾದ

ಹಣೆಗಿಟ್ಟುಕೊಂಡು, ಮೇಲೆ ಕಾಣ್ತಾ ಇರೋ ಗೋಪುರ ದರ್ಶನ ಮಾಡಿ, ಸ್ವಲ್ಪ ಮುಂದೆ ಬಂದು, ಎಡಕ್ಕೆ ತಿರುಗಿ, ಅಲ್ಲಿ ಧನ್ವಂತ್ರಿ ಹತ್ತಿರ ಇರೋ ದಶಾವತಾರಗಳನ್ನೆಲ್ಲಾ ನೋಡ್ತಾ, ಮತ್ಸ್ಯ, ಕೂರ್ಮ, ವರಾಹ, ಅಲ್ಲಿತನಕ ಕಾಣ್ತಾ ಇರೋ ಈ ಮೂರು ಅವತಾರಗಳನ್ನು ನೋಡಿ, ಆಮೇಲೆ

"ವಿನಾ ವೇಂಕಟೇಶಂ ನ ನಾಥೋ ನ ನಾಥಃ ಸದಾ ವೇಂಕಟೇಶಂ ಸ್ಮರಾಮಿ ಸ್ಮರಾಮಿ"

ಅಂತ ಹೇಳ್ಕೊಂಡು, ಎದುರಿಗೆ ಕಾಣ್ತಿರೋ ಗರುತ್ಮಂತನಿಗೆ ನಮಸ್ಕಾರ ಮಾಡಿ, ದ್ವಾರ ಪಾಲಕರಾದ ಜಯ ವಿಜಯರನ್ನ ನೋಡ್ಕೊಂಡು, ಚಿಕ್ಕ ಮೆಟ್ಟಿಲು ಹತ್ತಿ ಒಳಗೆ ನೋಡಿದಾಗ ಅಲ್ಲಿ, ಫಳ ಫಳ ಹೊಳೀತಾ ಇರೋ ಕಪ್ಪು ಮುಖ, ದೊಡ್ಡದಾಗಿರೋ ಫಳ ಫಳ ಹೊಳೀತಾ ಇರೋ ಕಿರೀಟ, ಸುಂದರವಾದ ನಾಮ, ಗಂಧದ ಬೊಟ್ಟು, ತೋಮಾಲೆ, ತುಳಸೀ ಮಾಲೆ, ತರಾವರಿ ಹೂವಿನ ಮಾಲೆಗಳು, ಬಲಗೈಯ್ಯಲ್ಲಿ ಚಕ್ರ, ಎಡಗೈಯ್ಯಲ್ಲಿ ಶಂಖ, ಶ್ರೀದೇವಿ, ಭೂದೇವಿ ಅಮ್ಮನವರು, ಅವರಿಗೆ ಹಾಕಿರೋ ಹೂಮಾಲೆ, ಆಮೇಲೆ ಸೊಂಟದ ಹತ್ತಿರ ಇರೋ ಹಸ್ತ, ಯಾರು ಈ ಕಲಿಯುಗದಲ್ಲಿ ನನ್ನ ಪಾದವನ್ನು ನೋಡ್ತಾ ಇರ್ತಾರೋ ಅವರ ಕಷ್ಟಗಳೆಲ್ಲಾ ದಗ್ಧ ಅಂತ ಹೇಳ್ತಾ ಇರೋ ದೇವರು, ಆಪಾದಮಸ್ತಕ ಆ ಭವ್ಯಮೂರ್ತಿಯನ್ನ ಎಷ್ಟು ನೋಡಿದರೂ ಸಾಲದು ಅನ್ನಿಸುವ "ಪುಂಸಾಂ ಮೋಹನ ರೂಪಾಯ" ನಾದ ವೇಂಕಟೇಶ್ವರನನ್ನು ನೋಡಿ, ಭಕ್ತಿಯಿಂದ ನಮಸ್ಕರಿಸಿ, ದೇವರ ಹಿಂದೆ ಇರೋ ಸ್ವಯಂ ಆಗಿ ಉದ್ಭವವಾಗಿರೋ ಶಂಖ ಚಕ್ರ ನೋಡಿ, ಸ್ವಾಮೀಜಿಯವರಿಗೆ ಮೇಕೆದಾಟಲ್ಲಿ ಸಿಕ್ಕಿರೋ ಪುಟಾಣಿ ವೇಂಕಟೇಶ್ವರನನ್ನು ನೋಡಿ, ಈ ವೇಂಕಟೇಶ್ವರನಿಂದ ತಾನೇ ಇಷ್ಟು ದೊಡ್ಡ ದೇವಸ್ಥಾನ ನಿರ್ಮಾಣ ಆಗಿದ್ದು ಅಂತ ನೆನೆದು, ಇನ್ನೊಂದು ಉತ್ಸವ ಮೂರ್ತಿನೂ ನೋಡಿ, ನಮಸ್ಕಾರ ಮಾಡಿ, ಅವರು ಕೊಟ್ಟ ಮಂಗಳಾರತಿ, ತೀರ್ಥ, ಪ್ರಸಾದಗಳನ್ನು ತೊಗೊಂಡು, ಹೊರಕ್ಕೆ ಬಂದು, ಹಿಂದೆ ತಿರುಗಿ ಮತ್ತೆ ದೇವರಿಗೆ ನಮಸ್ಕಾರ ಮಾಡಿ, ಅಲ್ಲಿರುವ ಗುರುಪಾದುಕೆಗಳಿಗೆ ವಂದನೆ ಮಾಡಿ,

"ವಿನಾ ವೇಂಕಟೇಶಂ ನ ನಾಥೋ ನ ನಾಥಃ ಸದಾ ವೇಂಕಟೇಶಂ ಸ್ಮರಾಮಿ ಸ್ಮರಾಮಿ।
ಹರೇ ವೇಂಕಟೇಶ ಪ್ರಸೀದ ಪ್ರಸೀದ ಪ್ರಿಯಂ ವೇಂಕಟೇಶಂ ಪ್ರಯಚ್ಛ ಪ್ರಯಚ್ಛ ॥
ನಾರಾಯಣಂ ಪರಬ್ರಹ್ಮ ಸರ್ವಕಾರಣಕಾರಣಮ್।
ಪ್ರಪದ್ಯೇ ವೇಂಕಟೇಶಾಖ್ಯಂ ತದೇವ ಕವಚಂ ಮಮ॥

ಸಹಸ್ರಶೀರ್ಷಾ ಪುರುಷೋ ವೇಂಕಟೇಶ್ಶಿರೋವತು।

ಪ್ರಾಣೇಶಃ ಪ್ರಾಣನಿಲಯಃ ಪ್ರಾಣಾನ್ ರಕ್ಷತು ಮೇ ಹರಿಃ॥

ಆಕಾಶರಾಟ್ಸುತಾನಾಥ ಆತ್ಮಾನಂ ಮೇ ಸದಾವತು।

ದೇವದೇವೋತ್ತಮೋ ಪಾಯಾದ್ದೇಹಂ ಮೇ ವೇಂಕಟೇಶ್ವರಃ॥

ಸರ್ವತ್ರ ಸರ್ವಕಾಲೇಷು ಮಂಗಾಂಬಾಜಾನಿರೀಶ್ವರಃ।

ಪಾಲಯೇನ್ಮಾಂ ಸದಾ ಕರ್ಮಸಾಫಲ್ಯಂ ನಃ ಪ್ರಯಚ್ಛತು॥

ಯ ಏತದ್ವಜ್ರಕವಚಮಭೇದ್ಯಂ ವೇಂಕಟೇಶಿತುಃ।

ಸಾಯಂ ಪ್ರಾತಃ ಪಠೇನ್ನಿತ್ಯಂ ಮೃತ್ಯುಂ ತರತಿ ನಿರ್ಭಯಃ॥"

ಅಂತ ಹೇಳ್ಕೋತಾ ಪ್ರದಕ್ಷಿಣೆ ಮಾಡ್ಕೊಂಡು ಬರ್ತಾ ಇರೋವಾಗ ದಶಾವತಾರದ ಮೂರ್ತಿಗಳಿಗೆ ಕೈಮುಗಿದು,

"ಮತ್ಸ್ಯ ಕೂರ್ಮೋ ವರಾಹಶ್ಚ ನಾರಸಿಂಹೋಚ ವಾಮನಾಃ,

ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಾಃ ಕಲ್ಕೀಚ ತೇ ದಶಃ"

ಅಂತ ನೃಸಿಂಹ, ವಾಮನ, ಪರಶುರಾಮ, ಶ್ರೀರಾಮ, ಶ್ರೀಕೃಷ್ಣ, ಕಲ್ಕಿ, ಬಲರಾಮ ಎಲ್ಲರಿಗೂ ನಮಸ್ಕಾರ ಮಾಡಿಕೊಂಡು, ಧನ್ವಂತ್ರಿ ಹತ್ತಿರ ಬಂದು,

"ನಮಾಮಿ ಧನ್ವಂತರಿಮ್ ಆದಿದೇವಮ್ ಸುರಾಸುರ ವಂದಿತ ಪಾದ ಪದ್ಮಮ್,

ಲೋಕೇ ಜರಾರುಗ್ಭಯಮೃತ್ಯುನಾಶಮ್ ದಾತಾರಮೀಶಂ ವಿವಿದೌಷಧೀನಾಮ್"

ಅಂತ ಧನ್ವಂತ್ರಿಗೆ ನಮಸ್ಕಾರ ಮಾಡಿ, ಪಕ್ಕದಲ್ಲಿರುವ ನವಗ್ರಹಗಳಿಗೆ ಪ್ರದಕ್ಷಿಣೆ ಮಾಡಿ,

"ನಮಃ ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯ ಚ

ಗುರು ಶುಕ್ರ ಶನಿಭ್ಯಶ್ಚ ರಾಹುವೇ ಕೇತುವೇ ನಮಃ"

ಅಂತ ಸ್ತೋತ್ರ ಹೇಳಿ, ನಮಸ್ಕಾರ ಮಾಡಿ, ಅಲ್ಲಿಂದ ಹೊರಗಡೆ ಬಂದು, ಗರುತ್ಮಂತನಿಗೆ ನಮಸ್ಕಾರ ಮಾಡಿ, ಒಂದು ಐದು ನಿಮಿಷ ಅಲ್ಲೇ ಕೂತ್ಕೊಂಡು,

"ಶ್ರೀ ದತ್ತ ವೇಂಕಟೇಶಾಯ ನಮಃ, ಶ್ರೀ ದತ್ತ ವೇಂಕಟೇಶಾಯ ನಮಃ,

ಶ್ರೀ ದತ್ತ ವೇಂಕಟೇಶಾಯ ನಮಃ"

ಅಂತ ಪ್ರಾರ್ಥನೆ ಮಾಡಿ, ಆ ಕಡೆ ಪಕ್ಕ ಮತ್ತೆ ಪದ್ಮಾವತಿಯ ದರ್ಶನ ಮಾಡಿ, ಮತ್ತೊಮ್ಮೆ ವೇಂಕಟೇಶ್ವರನ್ನ, ಧನ್ವಂತ್ರಿಯನ್ನ ನೋಡಿ, ನಮಸ್ಕಾರ ಮಾಡಿ, ಹೊರಗೆ ಬಂದ್ರೆ, ತುಳಸೀ ವನದಿಂದ ಘಂ ಅಂತ ಬರ್ತಾ ಇರೋ ಸುವಾಸನೆಯಿಂದ ಮನಸ್ಸಿಗೆ ಆಹ್ಲಾದವಾಗಿ, ಸ್ವಾಮೀ ಎಷ್ಟೊಂದು ಜನರ ಕಷ್ಟಗಳನ್ನೆಲ್ಲಾ ಪರಿಹಾರ ಮಾಡ್ತಾ ಇದೀ ಅಂತ

"ತಮಸ್ವಿನ್ ಕಾರ್ಯ ನಿರ್ಯೋಗೇ ಪ್ರಮಾಣಂ ಹರಿಸತ್ತಮ

ಹನುಮಾನ್ ಯತ್ನಮಾಸ್ತಾಯ ದುಃಖಕ್ಷಯಕರೋಭವಃ"

ತಿರುಪತಿಯಲ್ಲೂ ಇದೇ ತರ ಬಯಲು ಆಂಜನೇಯ ಇದೆ ಅಂದ್ಕೊಂಡು, ಆಂಜನೇಯಸ್ವಾಮಿಗೆ ನಮಸ್ಕಾರ ಮಾಡಿಕೊಂಡು, ಆಂಜನೇಯನಿಗೆ ಇರೋ ಹಾಗೆ, ನಮಗೂ ಭಕ್ತಿ, ಶ್ರದ್ಧೆ ಒಂದು ಸ್ವಲ್ಪ ನಮಗೂ ಬರುವ ಹಾಗಾಗಲಿ, ದೇವರಲ್ಲಿ ಮನಸ್ಸನ್ನ ನಿಲ್ಲಿಸೋ ಶಕ್ತಿ ಕೊಡಪ್ಪಾ ಅಂತ ಪ್ರಾರ್ಥಿಸಿ, ಹಿಂದೆ ತಿರುಗಿದರೆ, ನಾಟ್ಯ ಭಂಗಿಯಲ್ಲಿರೋ ತುಂಬುರು ನಾರದ ಎಲ್ಲರನ್ನೂ ನೋಡಿ, ಮತ್ತೆ ಎಡಗಡೆ ಇರುವ ರುದ್ರಾಕ್ಷಿ, ಮತ್ತೆ ರಥವನ್ನು ನೋಡಿ, ಮಂಟಪದಲ್ಲಿರೋ ಹೋಮಕುಂಡ, ಅದಕ್ಕೆ ನಮಸ್ಕಾರ ಮಾಡಿ, ಬೆಳಗ್ಗೆ ವೇಂಕಟೇಶ್ವರ ಕಲ್ಯಾಣ ಆಗಿರಬಹುದು ಅಂತ ಅಂದ್ಕೊಂಡು, ಮತ್ತೆ ಮುಂದೆ

"ನಮಸ್ತೇ ಅಸ್ತು ಭಗವನ್ ವಿಶ್ವೇಶ್ವರಾಯ, ಮಹಾದೇವಾಯ, ತ್ರಯಂಬಕಾಯ,

ತ್ರಿಪುರಾಂತಕಾಯ, ತ್ರಿಕಾಗ್ನಿಕಾಲಾಯ, ಕಾಲಾಗ್ನಿರುದ್ರಾಯ, ನೀಲಕಂಠಾಯ,

ಮೃತ್ಯುಂಜಯಾಯ, ಸರ್ವೇಶ್ವರಾಯ, ಸದಾಶಿವಾಯ,

ಶ್ರೀಮನ್ಮಹಾದೇವಾಯ ನಮಃ"

ಅಂತ ಹೇಳ್ಕೊಂಡು, ಅಲ್ಲಿರೋ ಸ್ಫಟಿಕ ಲಿಂಗ, ಪಚ್ಚೆ ಲಿಂಗ, ಸುತ್ತ ಇರೋ ಬಣ್ಣ ಬಣ್ಣದ ಲಿಂಗಗಳು, ಅದರ ಮೇಲಿರೋ ಬಣ್ಣ ಬಣ್ಣದ ದಾಸವಾಳಗಳು, ಮಂದವಾಗಿ ಉರೀತಾ ಇರೋ ದೀಪ, ಪಕ್ಕದಲ್ಲಿ ಇರೋ ಕಾರ್ತಿವೀರ್ಯಾರ್ಜುನನ ಚಿತ್ರ ಎಲ್ಲಾ ನೋಡಿ, ತೀರ್ಥ, ಪ್ರಸಾದ ತೊಗೊಂಡು, ವಿಭೂತಿ ಇಟ್ಕೊಂಡು, ನಮಸ್ಕಾರ ಮಾಡಿ, ಮತ್ತೆ ಹೊರಗಡೆ ಬಂದು, ಅಲ್ಲಿರುವ ಅಷ್ಟಲಕ್ಷ್ಮಿಯರಿಗೆ ನಮಸ್ಕಾರ ಮಾಡಿ,

“ನಮಸ್ತೇಸ್ತು ಮಹಾಮಾಯೇ ಶ್ರೀಪೀಠೇ ಸುರಪೂಜಿತೇ

ಶಂಖ ಚಕ್ರ ಗದಾಹಸ್ತೇ ಮಹಾಲಕ್ಷ್ಮೀ ನಮೋಸ್ತುತೇ”

ಅಂತ ಪ್ರಾರ್ಥಿಸಿ, ಮತ್ತೆ ಮಹಾಸರಸ್ವತಿಗೆ ನಮಸ್ಕರಿಸಿ,

“ಯಾಕುಂದೇಂದು ತುಷಾರಹಾರ ಧವಳಾ ಯಾ ಶುಭ್ರವಸ್ತ್ರಾನ್ವಿತಾ

ಯಾ ವೀಣಾ ವರದಂಡಮಂಡಿತಕರಾ ಯಾ ಶ್ವೇತ ಪದ್ಮಾಸನಾ

ಯಾ ಬ್ರಹ್ಮಾಚ್ಯುತ ಶಂಕರಪ್ರಭೃತಿಭಿಃ ದೇವೈ್ಯ ಸದಾ ಪೂಜಿತಾ

ಸಾಮಾಂ ಪಾತು ಸರಸ್ವತೀ ಭಗವತೀ ನಿಶ್ಯೇಷಜಾಡ್ಯಾಪಹಾ”

ಅಂತ ಪ್ರಾರ್ಥಿಸಿ, ಅಲ್ಲಿ ಅಕ್ಷರ ಯಜ್ಞ ಪುಸ್ತಕಗಳಿಗೆ ಪ್ರದಕ್ಷಿಣೆ ಮಾಡಿ, ಆ ಮಹಾಸರಸ್ವತಿಯ ಪಾದಗಳನ್ನ ಹಿಡಿದು, ತಾಯೀ ನಿನ್ನ ದಯೆಯಿಂದ ಜೀವನ ನೆಮ್ಮದಿಯಾಗಿ ನಡೆಸಲು ಆಯ್ತಮ್ಮಾ, ಮಕ್ಕಳು ಚೆನ್ನಾಗಿ ಓದಿ, ಯಶಸ್ಸು ಪಡೆಯಲು ನಿನ್ನ ಕಟಾಕ್ಷವೇ ಕಾರಣ ಅಂತ ಕೈ ಮುಗಿದು, ಹೊರಗೆ ಬಂದು ಅಲ್ಲಿರುವ ನಾಗರ ಪ್ರತಿಷ್ಠೆ ಮಾಡಿರುವ ಸ್ಥಳಕ್ಕೆ ಬಂದು,

“ತ್ರಾಹಿ ತ್ರಾಹಿ ಮಹಾಭೋಗಿಂ ಸರ್ವೋಪದ್ರವ ದುಃಖತಃ

ಸಂತತಿಂ ದೇಹಿಮೇ ಪುಣ್ಯಾಂ ನಿರ್ದುಷ್ಟಾಮ್ ದೀರ್ಘಜೀವಿತಾಂ“

ಎಷ್ಟು ಜನ ನಾಗರ ಪ್ರತಿಷ್ಠೆ ಮಾಡಿ ಸಂತಾನ ಭಾಗ್ಯ ಪಡೆದಿದಾರೋ ಅಂದ್ಕೊಂಡು, ನವಗ್ರಹಗಳಿಗೆ ನಮಸ್ಕಾರ ಮಾಡಿ, ಸುಬ್ರಹ್ಮಣ್ಯ ಸ್ವಾಮಿಯ ದರ್ಶನ ಮಾಡಿ, “ಸರ್ವ ಬ್ರಹ್ಮಾಂಡನಾಥಸ್ಥಂ ಅಥಃಸ್ಥೇ ಶರಣಾಗತ ಶೃಣುಸ್ವಾಮಿನ್ ವಚೋಮೀತ್ಯ ಕಷ್ಟಂ ವೇರ್ವಿನಿವಾರಯಃ” ಅಂತ ಸ್ತೋತ್ರ ಹೇಳ್ಕೊಂಡು, ಮುದ್ದು ಮುದ್ದಾಗಿರೋ, ಪಚ್ಚೆಕಲ್ಲಲ್ಲಿರೋ ಸುಬ್ರಹ್ಮಣ್ಯ ಸ್ವಾಮಿಯನ್ನ, ಆಕಡೆ ಈಕಡೆ ಇಟ್ಟಿರೋ ದಂಡಗಳನ್ನ ನೋಡಿ, ಅದಕ್ಕೇ ಅಲ್ಲವಾ ಸುಬ್ರಹ್ಮಣ್ಯನ್ನ ದಂಡಪಾಣಿ ಅಂತಾರೆ ಅಂತ ಯೋಚಿಸಿಕೊಂಡು, ದೀಪಗಳ ಬೆಳಕಿನಲ್ಲಿ ಮುದ್ದಾದ ಸುಬ್ರಹ್ಮಣ್ಯನ್ನ ನೋಡಿ,

“ಓಂ ತತ್ಪುರುಷಾಯ ವಿದ್ಮಹೇ, ಮಹಾಸೇನಾಯ ಧೀಮಹಿ,

ತನ್ನೋ ಷಣ್ಮುಖಃ ಪ್ರಚೋದಯಾತ್”

ಎಂದು ಪ್ರಾರ್ಥಿಸಿ, ಅಲ್ಲಿ ಬರೆದಿರೋ ಸ್ತೋತ್ರಗಳನ್ನೆಲ್ಲಾ ಓದಿ,

“ಅರ್ಧಕಾಯಂ ಮಹಾವೀರಂ ಚಂದ್ರಾದಿತ್ಯ ವಿಮರ್ದನಂ

ಸಿಂಹಿಕಾ ಗರ್ಭಸಂಭೂತಂ ತಂ ರಾಹುಮ್ ಪ್ರಣಮಾಮ್ಯಹಮ್”,

“ಫಲಾಶಪುಷ್ಪಸಂಕಾಶಂ ತಾರಕಾಗ್ರಹ ಮಸ್ತಕಮ್

ರೌದ್ರಮ್ ರೌದ್ರಾಂತಕಂ ಘೋರಂ ತಂ ಕೇತುಂ ಪ್ರಣಮಾಮ್ಯಹಮ್”

ಅಂತ ಪ್ರಾರ್ಥಿಸಿ, ಅಲ್ಲಿ ತೀರ್ಥ, ಆರತಿ, ಪ್ರಸಾದ ಎಲ್ಲಾ ತೊಗೊಂಡು, ಮೆಟ್ಟಿಲು ಹತ್ತಿ, ಅಲ್ಲಿರೋ ದೊಡ್ಡ ಬಂಡೆಕಲ್ಲು, ಅದರ ಮೇಲಿರೋ ದೊಡ್ಡ ನಾಮ, ಅದನ್ನ ನೋಡಿ, ಈ ದೊಡ್ಡ ಬಂಡೆಕಲ್ಲು ಮೇಕೆದಾಟಿನಲ್ಲಿ ಸ್ವಾಮೀಜಿಗೆ ಸಿಕ್ಕಿದ್ದಕ್ಕೇ ಅಲ್ಲವಾ ಇಷ್ಟು ದೊಡ್ಡ ಆಲಯ ನಿರ್ಮಾಣ ಆಯಿತು ಅಂತ ಅಂದ್ಕೊಂಡು, ಬಂಡೆಕಲ್ಲಿಗೆ ನಮಸ್ಕಾರ ಮಾಡಿ, ಮೆತ್ತಗೆ ಹತ್ತಿ, ಅಲ್ಲಿರೋ ವರಾಹ ಮೂರ್ತಿನ ಮತ್ತೆ ಲಕ್ಷ್ಮಿನ ನೋಡಿ, ವೇಂಕಟರಮಣನ ದರ್ಶನಕ್ಕೆ ಮೊದಲೇ ನಿನ್ನ ನೋಡಬೇಕಿತ್ತಪ್ಪಾ, ಈಗ ಬಂದುಬಿಟ್ಟಿದೀನಿ ಅಂತ ನಮಸ್ಕಾರ ಮಾಡಿ,

“ವನಮಾಲೀ ಗದೀ ಶಾಂರ್ಙ್ಗೀ ಶಂಖೀ ಚಕ್ರೀ ಚ ನಂದಕೀ

ಶ್ರೀಮಾನ್ ನಾರಾಯಣೋ ವಿಷ್ಣು ವಾಸುದೇವೋ ಭಿರಕ್ಷತು”

ಅಂತ ಎಲ್ಲಾ ದೇವರ ಪಾದಗಳಿಗೆ ನಮಸ್ಕರಿಸಿ, ಪ್ರದಕ್ಷಿಣೆ ಮಾಡಿ ಬಂದಾಗ, ದತ್ತಾತ್ರೇಯರನ್ನ ನೋಡ್ಕೊಂಡು, ಅವರ ಕಿವೀಲಿ ನಮ್ಮ ಬೇಡಿಕೆ ಎಲ್ಲಾ ಹೇಳಿಬಿಟ್ಟು,

“ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ

ಗುರುಃ ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ”

ಅಂತ ದತ್ತಾತ್ರೇಯರಿಗೂ ನಮಸ್ಕಾರ ಮಾಡಿ, ಮತ್ತೊಮ್ಮೆ ಎಲ್ಲದಕ್ಕೂ ಮೂಲವಾದ ಆ ಭವ್ಯವಾದ ಬಂಡೆಗೆ ನಮಸ್ಕಾರ ಮಾಡಿ, ಬಂದು, ಇನ್ನೊಂದುಸಲ ಬಗ್ಗಿ, ದೂರದಿಂದ ದೇವರನ್ನ ನೋಡಿ, “ಪುನರ್ದರ್ಶನ ಪ್ರಾಪ್ತಿರಸ್ತು” ಅಂತ ಬೇಡಿಕೊಂಡು, ಬಂದಾಗ ಶ್ರೀ ದತ್ತ ವೇಂಕಟೇಶ್ವರನ ದರ್ಶನ ಆಯಿತಲ್ವಾ?

## ಶ್ರೀ ಅಚ್ಯುತಾನಂತ ಗೋವಿಂದೇಭ್ಯೋ ನಮಃ